# ತೌಲನಿಕ ಧರ್ಮದ ಬಗ್ಗೆ ಸ್ವಾಮಿ ವಿವೇಕಾನಂದರು-೨

ಡಾ॥ ಹೆಚ್. ರಾಮಚಂದ್ರಸ್ವಾಮಿ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಶ್ರೀರಾಮಕೃಷ್ಣರ ಈ ಸರ್ವಧರ್ಮ ಸಮನ್ವಯವೇ ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರ ಚೊಚ್ಚಲ ಭಾಷಣದ ಮುಖ್ಯವಾದ ಆಶಯವಾಗಿತ್ತು ಎಂಬುದು ಗಮನಾರ್ಹ. ಅಲ್ಲಿ ಅವರು ಹೇಳುತ್ತಾರೆ: 'ಸೋದರರರೆ, ಬಾಲ್ಯದಿಂದಲೂ ನಾನು ನಿತ್ಯವೂ ಪಠಿಸಿಕೊಂಡು ಬಂದಿರುವ ಶ್ಲೋಕವೊಂದನ್ನು ಹೇಳುತ್ತೇನೆ ಕೇಳಿ:

ತ್ರಯೀ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ।
ಪ್ರಭಿನ್ನೇ ಪ್ರಸ್ಥಾನೇ ಪರಮಿದಮದಃ ಪಥ್ಯಮಿತಿ ಚ ॥
ರುಚೀನಾಂ ವೈಚಿತ್ರ್ಯಾತ್ ಋಜುಕುಟಿಲ ನಾನಾ ಪಥಜುಷಾಂ।
ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ ॥

"ನಿನ್ನನ್ನು ಸೇರುವ ದಾರಿಯು ವೈದಿಕ, ಸಾಂಖ್ಯ, ಯೋಗ, ಪಾಶುಪತ, ವೈಷ್ಣವ ಎಂದು ಬೇರೆ ಬೇರೆ ಜನರ ಅಭಿರುಚಿಗೆ ತಕ್ಕಂತೆ ಬೇರೆಬೇರೆಯಾಗಿದೆ. ಇದು ಶ್ರೇಷ್ಠ, ಅದು ಸಾಧಾರಣ, ಇದು ಹಿತ, ಅದು ಕೀಳು, ಇದು ನೇರ, ಅದು ವಕ್ರ ಎಂಬ ವ್ಯತ್ಯಾಸಗಳೆಲ್ಲ ಅವರವರ ರುಚಿಗೆ ತಕ್ಕಂತೆ ತೋರುತ್ತವೆಯಾದರೂ ಎಲ್ಲ ನದಿಗಳಿಗೂ ಸಮುದ್ರವೇ ಕಡೆಯ ಆಶ್ರಯ ಎಂಬಂತೆ ಮನುಷ್ಯರೆಲ್ಲರೂ ಕೊನೆಗೆ ನಿನ್ನನ್ನೇ ಸೇರುವವರು." ಅನಂತರ ಅವರು ಭಗವದ್ಗೀತೆಯ ಶ್ಲೋಕವೊಂದನ್ನು ಉದಾಹರಿಸಿದರು:

ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ।
ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ॥

"ಯಾರು ಯಾರು ನನ್ನನ್ನು ಹೇಗೆ ಹೇಗೆ ಬಳಿಸಾರುತ್ತಾರೋ ಅವರಿಗೆ ನಾನು ಹಾಗೆಹಾಗೆಯೇ ದೊರೆಯುತ್ತೇನೆ; ವಿಭಿನ್ನ ಪಥಗಳಲ್ಲಿ ಬರುವ ಎಲ್ಲರೂ ಕೊನೆಗೆ ಸೇರುವುದು ನನ್ನನ್ನೇ" (೪. ೧೧).

ಸ್ವಾಮಿ ವಿವೇಕಾನಂದರು ಪ್ರಪಂಚದ ಧಾರ್ಮಿಕ ಚರಿತ್ರೆಯಲ್ಲೇ ಚಿಕಾಗೋ ಸರ್ವಧರ್ಮ ಸಮ್ಮೇಳನವು ಒಂದು ಹೊಸ ಯುಗದ ನಾಂದಿಯೆಂದು ಭಾವಿಸಿ, ಇಲ್ಲಿಂದ ಮುಂದೆ ಲೋಕದಲ್ಲಿ ಧಾರ್ಮಿಕ ಕಲಹಗಳು ಇಲ್ಲದಿರುವಂತಾಗಲಿ ಎಂದು ಹಾರೈಸುತ್ತಾರೆ. "ಇಂದು ಬೆಳಗ್ಗೆ ಈ ಸಭೆಯ ಶುಭಾರಂಭವನ್ನು ಸೂಚಿಸಲು ಮೊಳಗಿಸಿದ ಘಂಟಾನಾದವು ಸಮಸ್ತ ಮತಾಂಧತೆಯ, ಖಡ್ಗ-ಲೇಖನಿಗಳಿಂದ ಸಾಧಿಸಲ್ಪಟ್ಟ ಮತೀಯ ಶೋಷಣೆಗಳ, ಹಾಗೂ ಒಂದೇ ಗುರಿಯೆಡೆಗೆ ಸಾಗುತ್ತಿದ್ದರೂ ಜನರಲ್ಲಿ ಮೊಳೆಯಬಹುದಾದ ಸಂಕುಚಿತ ಭಾವನೆಗಳ ಅಂತ್ಯವನ್ನು ಸೂಚಿಸುವ ಘಂಟಾನಾದವೂ ಆಗಲಿ ಎಂದು ಆಶಿಸುತ್ತೇನೆ."

ಆದರೆ ಧಾರ್ಮಿಕ ಯುದ್ಧಗಳು, ಮತೀಯ ಕಲಹಗಳು ನಿಲ್ಲುವುದು ಮಾತ್ರವೇ ಸ್ವಾಮಿ ವಿವೇಕಾನಂದರು ಪೌರಸ್ತ್ಯ ಪಾಶ್ಚಾತ್ಯ ದೇಶಗಳಲ್ಲಿ ಮಾಡಿದ ಧರ್ಮಸಮನ್ವಯದ ಆದರ್ಶ ಬೋಧನೆಯ ಗುರಿಯಾಗಿರಲಿಲ್ಲ. ಲೋಕದ ಹಿರಿಯ ಧರ್ಮಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಮಾನವನು ತನ್ನ ಅಧ್ಯಾತ್ಮ ಪರಂಪರೆಯನ್ನು ಶ್ರೀಮಂತಗೊಳಿಸಿಕೊಳ್ಳಬೇಕು ಎಂಬುದು ಅವರ ಆಶಯವಾಗಿತ್ತು. ಕೇವಲ ಪರಮತ ಸಹಿಷ್ಣುತೆ ಮಾತ್ರವಲ್ಲ, ಪರಧರ್ಮಗಳನ್ನು ನಮ್ಮದಾಗಿಸಿಕೊಳ್ಳುವ ಮೂಲಕ ನಮ್ಮ ಹೃದಯ ವಿಶಾಲವಾಗಬೇಕು. "ನಾನು ಹಳೆಯ ಧರ್ಮಗಳನ್ನೆಲ್ಲವನ್ನೂ ಸ್ವೀಕರಿಸಿ ಅನುಸರಿಸುತ್ತೇನೆ; ಅವು ಹೇಳುವ ರೂಪಗಳಲ್ಲಿ ದೇವರನ್ನು ಆರಾಧಿಸುತ್ತೇನೆ. ಮಹಮ್ಮದೀಯನ ಮಸೀದಿಗೆ ಹೋಗುವೆ; ಕ್ರೈಸ್ತನ ಚರ್ಚಿಗೆ ಹೋಗಿ ಶಿಲುಬೆಯೆದುರು ಮಂಡಿಯೂರುವೆ; ಬೌದ್ಧ ದೇವಾಲಯಕ್ಕೆ ತೆರಳಿ ಬುದ್ಧ ಹಾಗೂ ಅವನ ಶಾಸನಕ್ಕೆ ಶರಣಾಗುವೆ. ಹಿಂದೂವಿನೊಡನೆ ಅರಣ್ಯಕ್ಕೆ ತೆರಳಿ ಧ್ಯಾನದಲ್ಲಿ ಕುಳಿತು ಸಮಸ್ತರಿಗೂ ಬೆಳಕನ್ನೀಯುವ ಬೆಳಕಿನ ದರ್ಶನಕ್ಕಾಗಿ ಪ್ರಯತ್ನಿಸುವೆ" ಎನ್ನುತ್ತಾರೆ ಅವರು. ಸ್ವಾಮಿ ವಿವೇಕಾನಂದರ ಧರ್ಮದ ಕಲ್ಪನೆಯು ಸಹಿಷ್ಣುತೆ, ಮನೋವೈಶಾಲ್ಯಗಳಿಗಿಂತಲೂ ದೊಡ್ಡದು; ಲೋಕದ ಸಮಸ್ತ ಧರ್ಮಗಳ ಬೆಳಕು ಪ್ರತಿಯೊಬ್ಬನ ಹೃದಯವನ್ನೂ ಬೆಳಗಬೇಕು, ಅವನ ಅಧ್ಯಾತ್ಮ ಜೀವನ ಹೊಸದೊಂದು ಆಳವನ್ನು, ಆಯಾಮವನ್ನು ಪಡೆದುಕೊಳ್ಳಬೇಕು ಎಂಬುದು ಅವರ ಮಹದಾಸೆಯಾಗಿತ್ತು. ಧರ್ಮಗ್ರಂಥಗಳೆಲ್ಲವೂ ಅವರ ಪಾಲಿಗೆ ಭಗವಂತನ ಬರಹಗಳಾಗಿದ್ದವು; ಅವುಗಳಲ್ಲಿ ಅಡಗಿದ್ದ ದಿವ್ಯ ದರ್ಶನ ಚಿರಂತನವಾಗಿದ್ದಿತು. "ಭಗವಂತನ ಪುಸ್ತಕ ಮುಗಿದುಹೋಯಿತೆ, ಅಥವಾ ಮುಂದುವರಿಯುತ್ತಿದೆಯೆ? ಬೈಬಲ್, ವೇದಗಳು, ಕೊರಾನ್ ಮೊದಲಾದ ಪವಿತ್ರ ಗ್ರಂಥಗಳೆಲ್ಲ ಭಗವಂತನ ಪುಸ್ತಕದ ಕೆಲವು ಪುಟಗಳಷ್ಟೇ; ಓದಲು ಇನ್ನೂ ಅನಂತ ಸಂಖ್ಯೆಯ ಪುಟಗಳಿವೆ" ಎಂದರವರು. ಅವರೆಗೆ ಯಾರೂ ಈ ಮಹತ್ವದ ಪ್ರಶ್ನೆಯನ್ನು ಕೇಳಿರಲಿಲ್ಲ; ಈ ಕಲ್ಪನೆಯನ್ನು ಮುಂದಿಟ್ಟಿರಲಿಲ್ಲ. ಯಾರೊಬ್ಬರೂ ತಮ್ಮ ಅಧ್ಯಾತ್ಮ ಸಾಧನೆಯ ಫಲವಾಗಿ ಲಭಿಸಿದ ದರ್ಶನವನ್ನು, ಅನುಭವವನ್ನು, ತಮ್ಮ ತಮ್ಮ ಮಠಗಳ ಗುರುವೃಂದದ ಅಥವಾ

ಪ್ರವಾದಿಯೆನಿಸಿಕೊಂಡವರ ಮುಂದಿರಿಸಿ ಅವರ ಒಪ್ಪಿಗೆಗಾಗಿ ಕಾಯಬೇಕಾದುದಿಲ್ಲ. ಭಗವಂತನ ಪುಸ್ತಕವನ್ನು ಮುಂದಕ್ಕೆ ಓದಿಕೊಂಡು ಹೋಗಲು ಪ್ರತಿಯೊಬ್ಬರಿಗೂ ಹಕ್ಕಿದೆ. ಮಾನವನ ಪಾಲಿಗೆ ಅಧ್ಯಾತ್ಮ ವಿವೇಕದ ಅನಾವರಣವು ಅರಿತಷ್ಟೂ ಮುಗಿಯದ ಅನಂತವಾಗಿದೆ.

ಧರ್ಮವನ್ನು ಕುರಿತಂಥ ಈ ದೃಷ್ಟಿಗೆ ಸ್ವಾಮಿ ವಿವೇಕಾನಂದರೇ ಉದಾಹರಣೆ. ಅವರು ಹಿಂದೂ ಆಗಿ ಹುಟ್ಟಿದ್ದರೂ, ಅವರಿಗೆ ಬೌದ್ಧ ಧರ್ಮದ ಮೇಲೆ ತಮ್ಮದೇ ಆದ ವಿಶೇಷವಾದ ಒಲವಿತ್ತು. ಸರ್ವಧರ್ಮ ಸಮ್ಮೇಳನದಲ್ಲಿ ಅವರ ಐದನೆಯ ಭಾಷಣದ ಶೀರ್ಷಿಕೆ "ಬೌದ್ಧಧರ್ಮ: ಹಿಂದೂ ಧರ್ಮದ ಸಫಲತೆ." ಸಭೆಯಲ್ಲಿ ಅವರು ಹಿಂದೂಧರ್ಮದ ಪ್ರತಿನಿಧಿ; ಬೌದ್ಧ ಧರ್ಮದ ಪರವಾಗಿ ಮಾತನಾಡಲು ಬೇರೆ ಭಾಷಣಕಾರರಿದ್ದರು. ಆದಾಗ್ಯೂ ಇಂತಹ ವಿಷಯವನ್ನು ಭಾಷಣಕ್ಕಾಗಿ ಆರಿಸಿಕೊಂಡ ಅವರ ಧೈರ್ಯ, ಮನೋದಾರ್ಢ್ಯ, ಸ್ವತಂತ್ರ ಮನೋಭಾವವನ್ನು ಊಹಿಸಿಕೊಳ್ಳಿ! ಒಂದು ಗೊತ್ತಾದ ಶಾಸ್ತ್ರಗ್ರಂಥವನ್ನುಳ್ಳ ಒಂದು ಪಂಥವು ಧರ್ಮವನ್ನು ತನ್ನ ಕಪಿಮುಷ್ಟಿಯಲ್ಲಿ ಹಿಡಿದಿಟ್ಟುಕೊಂಡು ಪುರೋಹಿತಶಾಹಿಯ ಬಲದಿಂದ ಅದನ್ನು ಮುಂದುವರೆಸಿಕೊಂಡು ಬರುವ ಕೆಟ್ಟ ಪದ್ಧತಿಯನ್ನು ಅದರಲ್ಲಿ ಬಲವಾಗಿ ತರಾಟೆಗೆ ತೆಗೆದುಕೊಂಡರು. "ಹಿಂದೂಧರ್ಮ ಬೌದ್ಧಧರ್ಮವಿಲ್ಲದೆ ಬದುಕಲಾರದು, ಬೌದ್ಧಧರ್ಮವೂ ಹಿಂದೂಧರ್ಮವಿಲ್ಲದೆ ಬದುಕಲಾರದು... ಬ್ರಾಹ್ಮಣರ ಅದ್ಭುತ ಮೇಧಾ ಶಕ್ತಿಯ ಜೊತೆಗೆ ಬುದ್ಧನ ಸಮನ್ವಯಶಕ್ತಿ, ಪ್ರೇಮಾನುಕಂಪಭರಿತ ಹೃದಯಗಳನ್ನು ಒಂದುಗೂಡಿಸೋಣ" ಎಂದು ಹೇಳುವಾಗ ಹಿಂದೂಧರ್ಮವನ್ನು ತಾನು ಕೆಳಗಿಳಿಸುವ ಬದಲು ಶ್ರೀಮಂತಗೊಳಿಸುತ್ತಿರುವೆ ಎಂದೇ ಅವರಿಗೆ ಅನ್ನಿಸಿರಬೇಕು. ಪುರಾತನ ನಂಬಿಕೆಗಳ ಪುನರುಜ್ಜೀವನ ಹಾಗೂ ತಾನು ಹುಟ್ಟಿದ ಧರ್ಮಕ್ಕಿಂತ ಭಿನ್ನವಾದ ಧರ್ಮಾದರ್ಶಗಳಿಗೆ ವಿಧಾಯಕವಾಗಿ ಪ್ರತಿಸ್ಪಂದಿಸುವ ಮೂಲಕ ತನ್ನ ಆಧ್ಯಾತ್ಮಿಕ ಪುನಶ್ಚೇತನವನ್ನು ಸಾಧಿಸುವುದು, ಇವು ಅಗತ್ಯವಾದ ನಿರಂತರ ಪ್ರಕ್ರಿಯೆಗಳು ಎಂಬುದು ಅವರ ಭಾವನೆಯಾಗಿದ್ದಿತು.

ಹಿಂದೂಧರ್ಮಕ್ಕೂ ಬೌದ್ಧಧರ್ಮಕ್ಕೂ ಆಧ್ಯಾತ್ಮಿಕ ರಕ್ತ ಸಂಬಂಧವಿರುವುದನ್ನು ಬೌದ್ಧಧರ್ಮದ ಇತಿಹಾಸ ಹೇಳುತ್ತದೆ. "ಗೌತಮನು ಹುಟ್ಟಿದ್ದು, ಬೆಳೆದದ್ದು, ಬಾಳಿ ಬದುಕಿ ಸತ್ತಿದ್ದು ಎಲ್ಲವೂ ಹಿಂದೂ ಆಗಿಯೇ... ಸಾಂಪ್ರದಾಯಿಕ ಪಂಥಗಳಲ್ಲಿಲ್ಲದ ತತ್ತ್ವಗಳನ್ನೇನೂ ಆತನು ಪ್ರತಿಪಾದಿಸಲಿಲ್ಲ; ಆತನ ನೈತಿಕತೆಯೂ ಸಹ ಹಿಂದೂ ಶಾಸ್ತ್ರಗಳಲ್ಲಿರುವಂಥದೇ", ಎನ್ನುತ್ತಾರೆ ಇತಿಹಾಸಕಾರ ರಿಸ್ ಡೇವಿಡ್ಸ್. ಆನಂದ ಕುಮಾರಸ್ವಾಮಿಯವರು ತಮ್ಮ 'ಹಿಂದೂಧರ್ಮ ಮತ್ತು ಬೌದ್ಧಧರ್ಮ' ಎಂಬ ಗ್ರಂಥದಲ್ಲಿ "ಮೇಲುಮೇಲಕ್ಕೆ ನೋಡಿದಾಗ ಬೌದ್ಧಧರ್ಮ ತಾನು ಹುಟ್ಟಿದ ಬ್ರಾಹ್ಮಣಧರ್ಮಕ್ಕಿಂತ ಭಿನ್ನವಾಗಿ ಕಾಣುತ್ತದೆ; ಆದರೆ ಆಳವಾಗಿ ಅಧ್ಯಯನ ಮಾಡಿದಾಗ ಬೌದ್ಧಧರ್ಮದಲ್ಲಿ ಸಾಂಪ್ರದಾಯಿಕ ಬ್ರಾಹ್ಮಣಧರ್ಮದಲ್ಲಿ ಇಲ್ಲದ್ದು ಯಾವುದಿದೆ ಎಂಬುದನ್ನು ಕಂಡುಹಿಡಿಯುವುದೇ ಕಷ್ಟವಾಗುತ್ತದೆ" ಎಂದು ಹೇಳುತ್ತಾರೆ. ಆದ್ದರಿಂದ, ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಬೌದ್ಧಧರ್ಮವು ಹಿಂದೂಧರ್ಮದ ಸಫಲತೆ ಎಂದು ಹೇಳಿದಾಗ ಅದು ತೌಲನಿಕ ಧರ್ಮದ ಆಳವಾದ ಅಧ್ಯಯನದಿಂದ ಹೊರಹೊಮ್ಮಿದ ಅಧ್ಯಾತ್ಮಿಕ ಇತಿಹಾಸದ ಒಂದು ಅಂಶವನ್ನು ಪ್ರತಿಪಾದಿಸಿದಂತೆ ಆಯಿತು. ಆ ಸಮ್ಮೇಳನದಲ್ಲಿ ಅವರು ಮಾಡಿದ ಆರು ಭಾಷಣಗಳ ಒಟ್ಟು ಸಾರಾಂಶ ಅವರು ಮೊದಲ ಭಾಷಣದಲ್ಲಿ ಹೇಳಿದ್ದೇ: "ನಾವು ಸಾರ್ವತ್ರಿಕ ಸಹಿಷ್ಣುತೆಯನ್ನು ನಂಬುವುದು ಮಾತ್ರವಲ್ಲ, ಧರ್ಮಗಳೆಲ್ಲವನ್ನೂ ಸತ್ಯವೆಂದು ಸ್ವೀಕರಿಸುತ್ತೇವೆ."

ವಿಶ್ವಧರ್ಮವೆಂಬುದು ವಿವೇಕಾನಂದರಿಗೆ ಕೇವಲ ಪುಸ್ತಕಗಳಲ್ಲಿನ ಅಭಿಪ್ರಾಯವಾಗಿರದೆ ಒಂದು ಸ್ವಾನುಭವವಾಗಿತ್ತು, ಸಾಕ್ಷಾತ್ಕಾರವಾಗಿತ್ತು. ಈ ಅನುಭವವನ್ನು, ಈ ಸಾಕ್ಷಾತ್ಕಾರವನ್ನು ಅವರಿಗೆ ದೊರಕಿಸಿಕೊಟ್ಟಿದ್ದು ಶ್ರೀರಾಮಕೃಷ್ಣರು. ತಾವೇ ಸಮಸ್ತ ಧರ್ಮಗಳ ಸಾಕ್ಷಾತ್ಕಾರವನ್ನು ಸಾಧನೆಯ ಮೂಲಕ ಪಡೆದಿದ್ದುದರಿಂದ ಅವರಿಗೆ ಇದು ಸಾಧ್ಯವಾಯಿತು. ವಿವೇಕಾನಂದರು 'ನನ್ನ ಗುರುದೇವ' ಎಂಬ ಉಪನ್ಯಾಸದಲ್ಲಿ ಶ್ರೀರಾಮಕೃಷ್ಣರ ಸಂದೇಶವನ್ನು ಬಿತ್ತರಿಸಿದ ಮೇಲೆ, ಕೊನೆಯಲ್ಲಿ ಹೀಗೆನ್ನುತ್ತಾರೆ: "ಹೊಸ ಪ್ರಪಂಚಕ್ಕೆ ಶ್ರೀರಾಮಕೃಷ್ಣರ ಸಂದೇಶವಿದು: ಸಿದ್ಧಾಂತಗಳಿಗೆ, ಮತಪಂಥಗಳಿಗೆ, ದೇವಸ್ಥಾನಗಳಿಗೆ, ಚರ್ಚುಗಳಿಗೆ ಪ್ರಾಶಸ್ತ್ಯ ಕೊಡಬೇಡಿ: ಪ್ರತಿಯೊಬ್ಬನಲ್ಲಿಯೂ ಇರುವ ಅಧ್ಯಾತ್ಮವೆಂಬ ಅಸ್ತಿತ್ವದ ಸಾರದೊಂದಿಗೆ ಹೋಲಿಸಿದರೆ ಅವುಗಳು ನಗಣ್ಯ". ಇದೇ ಸಂದೇಶವನ್ನೇ ವಿವೇಕಾನಂದರು ಸರ್ವಧರ್ಮ ಸಮ್ಮೇಳನದ ಮೂಲಕ ಪ್ರಪಂಚಕ್ಕೆ ನೀಡಿದರು.

ತೌಲನಿಕ ಧರ್ಮದ ಅಧ್ಯಯನಕ್ಕಾಗಿ ಕಾಲೇಜೊಂದನ್ನು ಸ್ಥಾಪಿಸುವ ಹಾಗೂ ಪತ್ರಿಕೆಯೊಂದನ್ನು ಪ್ರಾರಂಭಿಸುವ ಸಲಹೆಯನ್ನು ಮಾಡಿದಾಗ, ವಿವೇಕಾನಂದರಿಗೆ ಕಲಿಕೆಯ ಮೂಲಕವಾದರೂ 'ಯತೋ ಮತ್, ತತೋ ಪಥ್' ಎಂಬ ಭಾವನೆಯನ್ನು ಜೀವಂತವಾಗಿರಿಸಬೇಕೆಂಬ ಉದ್ದೇಶವಿದ್ದಿತು. ಇತರ ಧರ್ಮಗಳು ಹೇಳುವುದೇನೆಂಬುದನ್ನು ಅರಿತಾಗ, ಅವನ್ನು ಸಹಿಸುವುದು ಮಾತ್ರವಲ್ಲ, ಅವುಗಳ ಗುಣಗ್ರಹಣ

ಮಾಡುವುದೂ ಸಾಧ್ಯವಾಗುತ್ತದೆ. ಇತರ ಧರ್ಮಗಳನ್ನು ಅಂತರ್ಬೋಧೆಯ ಮೂಲಕ ಸಾಕ್ಷಾತ್ಕರಿಸಿಕೊಳ್ಳುವುದು ಶ್ರೀರಾಮಕೃಷ್ಣರಂಥ ಸಂತರಿಗೆ ಮಾತ್ರ ಸಾಧ್ಯವೆಂದಾದರೂ, ನಾವು ಬುದ್ಧಿಯ ಹಂತದಲ್ಲಾದರೂ ಅದನ್ನು ತಲುಪ ಬಹುದಲ್ಲ! ತೌಲನಿಕ ಅಧ್ಯಯನದ ಮೂಲಕ ಧರ್ಮಗಳ ಸಮಾನ ಅಂಶಗಳನ್ನು ಗ್ರಹಿಸಿದಾಗ ಅದು ನಮ್ಮ ಆಧ್ಯಾತ್ಮಿಕ ಜೀವನಕ್ಕೊಂದು ಬೌದ್ಧಿಕ ಬೆಳಕಿಂಡಿಯಾಗುತ್ತದೆ. ಸ್ವಾಮಿ ವಿವೇಕಾನಂದರು ೧೮೯೭ರ ಜನವರಿಯಲ್ಲಿ ಪಾಶ್ಚಾತ್ಯ ರಾಷ್ಟ್ರಗಳಿಂದ ಹಿಂದಿರುಗಿದಾಗ ಅವರಿಗೆ ಕೊಲ್ಕತಾದಲ್ಲಿ ಸಲ್ಲಿಸಿದ ಮೊದಲ ಬಿನ್ನವತ್ತಳೆಯಲ್ಲಿ "ಧರ್ಮಗಳ ತೌಲನಿಕ ಅಧ್ಯಯನ ಹಾಗೂ ಅಧ್ಯಾತ್ಮ-ತತ್ತ್ವದ ಆವಿಷ್ಕಾರಕ್ಕಾಗಿ ಸಂಘಸಂಸ್ಥೆಗಳು ಬೇಗ ಬೇಗ ಹುಟ್ಟಿ ಬೆಳೆಯುತ್ತಿರುವುದು ನೀವು ಪಶ್ಚಿಮದಲ್ಲಿ ಕೈಗೊಂಡ ಕೆಲಸದ ಪರಿಣಾಮಕ್ಕೆ ಸಾಕ್ಷಿಯಾಗಿದೆ" ಎಂದು ಹೇಳಿರುವುದನ್ನು ಗಮನಿಸಬೇಕು. ಧರ್ಮಗಳ ತೌಲನಿಕ ಅಧ್ಯಯನದಲ್ಲಿನ ವಿವೇಕಾನಂದರ ಆಸಕ್ತಿಯು ವಿಶ್ವ ಧಾರ್ಮಿಕ ಚಿಂತನೆಯ ಏಕತೆಯ ಭಾಗವಾಗಿದೆ ಎಂಬುದನ್ನು ಜನರು ಗ್ರಹಿಸಿದ್ದರೆಂಬುದಕ್ಕೆ ಇದು ಸಾಕ್ಷಿಯಾಗಿದೆ. ಆನಂತರ ರಾಮಕೃಷ್ಣ ಮಹಾಸಂಘವು ವಿಶ್ವಧರ್ಮದ ಏಕತೆಯ ಕಡೆಗೆ ಕೊಂಡೊಯ್ಯುವ ಸೋಪಾನವಾಗಿ ತೌಲನಿಕ ಧರ್ಮದ ಅಧ್ಯಯನವನ್ನು ಚಾಲನೆಗೆ ತಂದಿತು.

೧೯೩೭ರಲ್ಲಿ ರಾಮಕೃಷ್ಣ ಮಠ-ಮಿಷನ್ ಶ್ರೀರಾಮಕೃಷ್ಣರ ಶತಮಾನೋತ್ಸವದ ಅಂಗವಾಗಿ ಕೊಲ್ಕತಾದಲ್ಲಿ ನಡೆಸಿದ ಧರ್ಮಸಮ್ಮೇಳನದಲ್ಲಿನ 'ವಿಶ್ವದ ಧರ್ಮಗಳು' ಎಂಬ ಅಧಿವೇಶನದಲ್ಲಿ ಧರ್ಮಗಳ ಐತಿಹಾಸಿಕ ಹಾಗೂ ತೌಲನಿಕ ಅಧ್ಯಯನವನ್ನೂ ಸೇರಿಸಲಾಗಿತ್ತು. ಅಲ್ಲದೆ ೧೯೬೩ರಲ್ಲಿ ಸ್ವಾಮಿ ವಿವೇಕಾನಂದ ಜನ್ಮ ಶತಮಾನೋತ್ಸವದ ಅಂಗವಾಗಿ ಜರುಗಿದ ಧರ್ಮಸಮ್ಮೇಳನದಲ್ಲಿಯೂ ತೌಲನಿಕ ಧರ್ಮದ ಅಧ್ಯಯನಕ್ಕೆ ಒಂದು ಅಧಿವೇಶನವನ್ನು ಮೀಸಲಿಡಲಾಗಿತ್ತು. ೧೯೮೦ರಲ್ಲಿ ನಡೆದ ರಾಮಕೃಷ್ಣ ಮಠ-ಮಿಷನ್ ಒಕ್ಕೂಟ ಸಭೆಯಲ್ಲಿಯೂ ಸಹ ಅಂತರ-ಧರ್ಮಗಳ ಅರಿವಿಗಾಗಿ ಒಂದು ಅಧಿವೇಶನವಿತ್ತು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಸ್ವಾಮಿ ಲೋಕೇಶ್ವರಾನಂದರು, "ಹಿಂದೂ ಆದ ನನಗೆ, ಇಸ್ಲಾಂ ಬಗ್ಗೆ ನಾನೀಗ ಕೇಳಿದ ಭಾಷಣವು ಹಿಂದೂಧರ್ಮದ ಬಗೆಗಿನ ಭಾಷಣದಂತೆಯೇ ಕೇಳಿಸಿತು" ಎಂದರೆ, ನ್ಯಾಯಮೂರ್ತಿ ಎ. ಎನ್. ರೇ ಅವರು, "ಮತಸಿದ್ಧಾಂತಗಳು ಒಡೆದು ಬೇರ್ಪಡಿಸಿದುದನ್ನು ಆಧ್ಯಾತ್ಮಿಕ ಅನುಭವವು ಹೇಗೆ ಒಂದುಗೂಡಿಸುವುದು ಎಂಬುದನ್ನು ರಾಮಕೃಷ್ಣರ ಜೀವನವು ನಿಚ್ಚಳವಾಗಿ ತೋರಿಸಿಕೊಡುತ್ತದೆ" ಎಂದರು. ಪ್ರತಿಯೊಂದು ಧರ್ಮದ ಸಾರವನ್ನರಿಯುವುದೇ ತೌಲನಿಕ ಧರ್ಮದ ಅಧ್ಯಯನವು ಮಾಡುವ ಕೆಲಸ. ಈ ಸಾರವೇ ವಿವೇಕಾನಂದರು ಕರೆಯುವ ವಿಶ್ವಧರ್ಮ. "ಇದು ಅಕ್ಬರನ ದೀನ್-ಇಲಾಹಿಯಂತೆ ಅಥವಾ ಕೇಶವಚಂದ್ರಸೇನನ ನವವಿಧಾನದಂತೆ ಧರ್ಮಗಳ ಒಂದು ಕೃತಕವಾದ ಸಂಯೋಜನೆಯಲ್ಲ. ಇದಕ್ಕೆ ಒಂದು ಸಾಮಾನ್ಯ ಶ್ರುತಿಸಾಹಿತ್ಯದ ಅಗತ್ಯವಿಲ್ಲ" ಎಂದು ೧೯೩೭ರ ಧರ್ಮಸಮ್ಮೇಳನದ ಅಧ್ಯಕ್ಷರಾಗಿ ಬ್ರಜೇಂದ್ರನಾಥ ಸೀಲ್ ಅವರು ಹೇಳಿರುವುದು ಯೋಗ್ಯವಾಗಿಯೇ ಇದೆ. ವಿಶ್ವಧರ್ಮವೆಂದರೆ ಹೊಸ ಧರ್ಮವಲ್ಲ; ಎಲ್ಲ ಧರ್ಮಗಳ ಪ್ರತ್ಯೇಕತೆಯನ್ನು ಉಳಿಸಿಕೊಂಡೂ ಅವುಗಳ ಸಮಾನ ಅಂಶಗಳನ್ನು ಗ್ರಹಿಸುವ ಮೂಲಕ ಪಡೆಯಬಹುದಾದ ಒಂದು ಮನಃಪರಿಪಾಕ, ಆತ್ಮವಿಕಾಸ.

ತೌಲನಿಕ ಧರ್ಮವು ಹೀಗೆ ನಮ್ಮ ಧಾರ್ಮಿಕ ಜೀವನದಲ್ಲಿ ಸಾರಾಸಾರ ವಿಚಾರದ ಮೂಲಕವಾಗಿ ವೈವಿಧ್ಯತೆಯ ನಡುವೆಯೂ ಏಕತೆಯನ್ನು ಸಾಧಿಸಲು ನೆರವಾಗುತ್ತದೆ. ರಾಧಾಕೃಷ್ಣನ್ 'ನನ್ನ ಸತ್ಯಾನ್ವೇಷಣೆ' ಎಂಬ ತಮ್ಮ ಲೇಖನದಲ್ಲಿ ಹಿಂದೂ ಎಂಬ ತಮ್ಮ ಧರ್ಮಾಭಿಮಾನವು "ಸ್ವಾಮಿ ವಿವೇಕಾನಂದರ ಕೆಲಸದಿಂದ, ಮಾತುಗಾರಿಕೆಯಿಂದ ಜಾಗೃತಗೊಂಡಿತು", ಎನ್ನುತ್ತಾರೆ. ಅವರು ತಮ್ಮ 'ರಾಮಕೃಷ್ಣ ಮತ್ತು ವಿವೇಕಾನಂದ' ಎಂಬ ಅನಂತರದ ಲೇಖನದಲ್ಲಿ "ರಾಮಕೃಷ್ಣ-ವಿವೇಕಾನಂದರ ಭಾವ ವಿಶ್ವಧರ್ಮದ್ದು; ಅದು ಸೈದ್ಧಾಂತಿಕ ಅಥವಾ ಮತಪಂಥೀಯಗಳ ಅರ್ಥದಲ್ಲಿ ಅಲ್ಲ; ಅವರು ನಮಗೆ ನೀಡುವುದು ನಿಜವಾದ ಆಧ್ಯಾತ್ಮಿಕ ಜೀವನದ ಮೂಲಭೂತ ತತ್ತ್ವವನ್ನು", ಎಂದು ಹೇಳುತ್ತಾರೆ. ಈ ನೈಜ ಆಧ್ಯಾತ್ಮಿಕ ಜೀವನದ ಸ್ವರೂಪವನ್ನು ಅರಿತುಕೊಳ್ಳುವುದಕ್ಕಾಗಿಯೇ ರಾಧಾಕೃಷ್ಣನ್ ತೌಲನಿಕ ಧರ್ಮದ ಅಧ್ಯಯನ ಬೇಕೆನ್ನುತ್ತಾರೆ. ಇದು "ಮತಸಿದ್ಧಾಂತಗಳ ವೈವಿಧ್ಯ, ಲಾಂಛನಗಳ ವೈವಿಧ್ಯ ಮುಂತಾದುವುಗಳಿಗೆ ಅತೀತವಾಗಿ, ಅವೆಲ್ಲವೂ ಅರ್ಥಹೀನವಾಗಿಬಿಡುವ ನೈಜ ಅಧ್ಯಾತ್ಮ ಪ್ರಜ್ಞೆಯ ಆಳಕ್ಕಿಳಿದು, ಧಾರ್ಮಿಕ ನಂಬಿಕೆಗಳ ಮೌಲ್ಯದ ಬಗ್ಗೆ ಒಂದು ಅಂತರ್ದೃಷ್ಟಿಯನ್ನು ನೀಡುತ್ತದೆ" (*Philosophy of S.Radhakrishnan,* **ed. Schlipp**). ತಮ್ಮ ***Eastern Religions and Western Thought*** ಎಂಬ ಗ್ರಂಥದಲ್ಲಿ ಅವರು "ಧಾರ್ಮಿಕ ನಂಬಿಕೆಗಳನ್ನು ತಮ್ಮ ಮೇಲೇ ಪ್ರಯೋಗ ಮಾಡಿಕೊಂಡು ರಾಮಕೃಷ್ಣರು ಅವುಗಳಲ್ಲಿರುವ ಗಟ್ಟಿಯಾದ ಮೌಲ್ಯ ಯಾವುದೆಂದು ಕಂಡುಹಿಡಿದರು" ಎನ್ನುತ್ತಾರೆ. ಇಂಥ ಪ್ರಯೋಗಗಳನ್ನು ಮಾಡಲು ರಾಮಕೃಷ್ಣರಂಥವರಿಗೆ ಮಾತ್ರ ಸಾಧ್ಯ. ನಮ್ಮಂಥವರು ತೌಲನಿಕ ಧರ್ಮದ ಅಧ್ಯಯನದಿಂದ ಬೌದ್ಧಿಕವಾಗಿಯಷ್ಟೇ ಧರ್ಮಗಳಲ್ಲಿ ಅಡಗಿರುವ ಸಾರ್ವತ್ರಿಕ ಸತ್ಯಗಳನ್ನು ಕಂಡುಕೊಳ್ಳಬಹುದು. ಈ ಕ್ಷೇತ್ರದಲ್ಲಿ ನಾವು

ಅಧ್ಯಯನ ಮಾಡುವಾಗ ಒಂದು ಧರ್ಮಕ್ಕೇ ವಿಶಿಷ್ಟವಾದ ಯಾವುದಾದರೂ ಆಧ್ಯಾತ್ಮಿಕ ಮೌಲ್ಯವುಳ್ಳ ಸಂಗತಿ ದೊರಕಿದರೆ, ಅದನ್ನು ನಾವು ನಮ್ಮ ಒಟ್ಟು ಆಧ್ಯಾತ್ಮಿಕ ಪರಂಪರೆಗೆ ಸೇರಿಸಿ ಕೊಂಡು ಅದಕ್ಕೆ ವಿಶ್ವಮೌಲಿಕತೆಯನ್ನು ದೊರಕಿಸಿಕೊಡುವೆವು.

ಸ್ವಾಮಿ ವಿವೇಕಾನಂದರು ವಿಶ್ವಧರ್ಮದ ಸಾಕ್ಷಾತ್ಕಾರದೆಡೆಗೆ ಒಂದು ಹೆಜ್ಜೆಯಾಗಿ ತೌಲನಿಕ ಧರ್ಮದ ಅಧ್ಯಯನವನ್ನು ಸೂಚಿಸಿದರೂ, ಅಂತಹ ಸಾಕ್ಷಾತ್ಕಾರವು ಶ್ರೀರಾಮಕೃಷ್ಣರ ಕೃಪೆಯಿಂದ ಅವರಿಗೆ ಆ ಮೊದಲೇ ದೊರೆತಿತ್ತು. ಆದರೂ, ತಾವು ಹುಟ್ಟಿದ ಧರ್ಮವನ್ನಲ್ಲದೆ ಇತರ ಧರ್ಮಗಳ ಶಾಸ್ತ್ರ ಗ್ರಂಥಗಳನ್ನೂ ತಾವು ಅಧ್ಯಯನ ಮಾಡಿರುವುದಾಗಿ ಅವರು ಹೇಳುವುದನ್ನು ಗಮನಿಸಬೇಕು. ಎರಡನೆಯದಾಗಿ, ಹಿಂದೂ ಧರ್ಮದಲ್ಲಿ ವೈವಿಧ್ಯತೆಯ ನಡುವೆ ಏಕತೆಯಿರುವುದನ್ನು ಅವರು ಮನಗಂಡಿದ್ದರು; ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮತಗಳನ್ನು ಅವರು ಒಂದೇ ವೇದಾಂತದ ಬೇರೆ ಬೇರೆ ಸ್ತರಗಳೆನ್ನುವರು; ಶೈವ, ಶಾಕ್ತ, ವೈಷ್ಣವರೆಲ್ಲರೂ ಬೇರೆ ಬೇರೆ ರೀತಿಗಳಲ್ಲಿ ಪೂಜಿಸುವುದು ಒಂದೇ ದೇವರನ್ನು ಎನ್ನುವರು; ಮಧ್ಯಯುಗದ ಆಳ್ವಾರುಗಳ, ಸಿಖ್ಖರ, ಶಾಕ್ತರ, ವೈಷ್ಣವರ, ಕಬೀರನ, ಗುರುನಾನಕನ ಹಾಡುಗಳಲ್ಲಿ ಅವರು ಕಾಣುವುದು ಅದೇ ಉಪನಿಷತ್ತುಗಳ, ವೇದಾಂತದ ನೆಲೆಗಟ್ಟನ್ನೇ. ನಾವು ತೌಲನಿಕ ಧರ್ಮದ ಅಧ್ಯಯನವನ್ನು ಕೈಕೊಳ್ಳಬೇಕೆಂಬ ಅವರ ಸಲಹೆಯು, ವಿವಿಧ ಧರ್ಮಗಳ ಹಾಗೂ ಮತಸಿದ್ಧಾಂತಗಳ ಹಿಂದಿರುವ ಧಾರ್ಮಿಕ ಚಿಂತನೆ ಒಂದೇ ಎಂಬುದನ್ನು ನಾವೇ ಅರಿತುಕೊಳ್ಳಲಿ ಎಂಬ ಉದ್ದೇಶವುಳ್ಳದ್ದಾಗಿದೆ.

# ✱ ಮೌನಗುರು ಗಣಪತಿ ✱

**ಕೆ. ವಿ. ಲಕ್ಷ್ಮೀನಾರಾಯಣ**

**ನಮ್ಮೆಲ್ಲರ ಅಚ್ಚುಮೆಚ್ಚಿನ ಗಣಪತಿಯನ್ನು ಕುರಿತು ಅನೇಕ ರೀತಿಯ ವ್ಯಾಖ್ಯಾನಗಳಿವೆ. ಅವನ ವಿಚಿತ್ರವಾದ ಆಕಾರದ ಅರ್ಥವೇನು ಎಂಬುದರ ಬಗ್ಗೆ ತಿಳಿಸಿರುವ ಮೈಸೂರಿನ ಈ ಲೇಖಕರು ಆಶ್ರಮದ ಭಕ್ತರಾಗಿದ್ದರು; ಇತ್ತೀಚೆಗೆ ತೀರಿಕೊಂಡಿದ್ದಾರೆ.**

ಗಣೇಶಚತುರ್ಥಿ ಪ್ರತಿವರ್ಷವೂ ಬರುತ್ತದೆ. ಆಗ ಎಲ್ಲೆಲ್ಲೂ ಗಣಪತಿಯ ಪೆಂಡಾಲುಗಳು. ಮೈಕಾಸುರನ ಆರ್ಭಟವಂತೂ ಹೇಳತೀರದು. ಗಣಪತಿಯ (ಸ್ವಯಂ)ಸೇವಕರು ರಶೀತಿ ಪುಸ್ತಕ, ಹುಂಡಿ ಡಬ್ಬಗಳೊಂದಿಗೆ ಎಲ್ಲೆಲ್ಲೂ ಹಾಜರು. ಅವರಿಂದ ತಪ್ಪಿಸಿಕೊಳ್ಳುವುದಂತೂ ಬಹಳ ಪ್ರಯಾಸದ ಕೆಲಸ. ಈ ಗಣಪತಿ ಯಾರು? ದಕ್ಷಿಣಾಮೂರ್ತಿ ಸ್ತೋತ್ರದಲ್ಲಿ "ಗುರೋಸ್ತು ಮೌನಂ ವ್ಯಾಖ್ಯಾನಮ್" ಎಂದು ಬರುತ್ತದೆ. ಶ್ರೀಗಣಪತಿಯೂ ಹಾಗೆಯೇ ತನ್ನ ಕಥೆಯಿಂದ, ಆಕೃತಿಯಿಂದ ಮೌನವಾಗಿ ನಮಗೆ ಅನೇಕ ವಿಷಯಗಳನ್ನು ತಿಳಿಸುತ್ತಾನೆ. ಅವುಗಳಲ್ಲಿ ಕೆಲವನ್ನು ಈಗ ಗಮನಿಸೋಣ.

ಗಣಪತಿಯ ಹುಟ್ಟಿನ ಬಗ್ಗೆ ಪುರಾಣಗಳಲ್ಲಿ ಅನೇಕ ರೀತಿಯ ಕಥೆಗಳು ಇವೆ. ಮುಖ್ಯವಾಗಿ ಅವನು ಗೌರೀಪುತ್ರ, ವಿಘ್ನಕಾರಕ ಮತ್ತು ವಿಘ್ನನಾಶಕ. ವಿಘ್ನಗಳಿದ್ದರೆ ಮಾನವನ ಮನಸ್ಸು ವಿಕಾಸವಾಗುತ್ತದೆ, ಸಂಕಲ್ಪಶಕ್ತಿ ದೃಢಗೊಳ್ಳುತ್ತದೆ. ಕಷ್ಟ ನಷ್ಟಗಳು ಜೀವನದಲ್ಲಿ ಅನಿವಾರ್ಯ. ಆಗ ಭಗವಂತ ನೊಬ್ಬನೇ ನಮಗೆ ಆಸರೆ. ಹಾಗೆ ಅವನು ವಿಘ್ನನಾಶಕನೂ ಕೂಡ. ಅವನು ಯಾವುದೇ ಒಂದು ಪಂಥದ ದೇವರಲ್ಲ. ಎಲ್ಲರೂ ಅವನನ್ನು ಪೂಜಿಸುತ್ತಾರೆ.

ಹಿಂದೂಗಳ ಸಂಘಟನೆಗೆ, ರಾಷ್ಟ್ರೀಯತೆಯ ಪ್ರಚಾರಕ್ಕೆ ಸಾರ್ವಜನಿಕ ಗಣಪತಿ ಉತ್ಸವಗಳನ್ನು ಬಳಸಿಕೊಳ್ಳಲು ಪ್ರಯತ್ನಿಸಿದವರಲ್ಲಿ ಮೊದಲಿಗರು ಬಾಲಗಂಗಾಧರ ತಿಲಕರು. ಹಾಗಾಗಿ ಗಣಪತಿಯು ಸಮಾಜ ಸಂಘಟನೆಯ ಮೂಲ ಪುರುಷನೂ, ರಾಷ್ಟ್ರೀಯ ಜಾಗೃತಿಯ ಪ್ರಚೋದಕನೂ ಆದನು.

ಗಣಪತಿ ಗೌರೀಪುತ್ರನಾಗಿ ಹುಟ್ಟಿದಮೇಲೆ ಒಮ್ಮೆ ಸತ್ತು ಮತ್ತೆ ಆನೆಯ ತಲೆಯೊಂದಿಗೆ ಮರುಹುಟ್ಟು ಪಡೆದನು. ಹಾಗೆಯೇ ಎಲ್ಲರೂ ಒಮ್ಮೆ ಸತ್ತು ಹುಟ್ಟಬೇಕು! ನಾನು ಎಂಬ ದೇಹಭಾವವು ಸತ್ತು, ಪರರಿಗಾಗಿ ಮತ್ತೆ ಹುಟ್ಟಿದಾಗ ಅವನು ಗಣಪತಿ–ಗುಂಪಿನ ಮುಖಂಡನಾಗಲು ಸಾಧ್ಯ. ಬುದ್ಧ, ವಿವೇಕಾನಂದ, ರಮಣ ಮಹರ್ಷಿ ಇವರೆಲ್ಲ ತಮ್ಮ ದೇಹಭಾವವನ್ನು ತ್ಯಜಿಸಿ ಪರರಿಗಾಗಿ ಮರುಹುಟ್ಟು ಪಡೆದು ಮಹಾತ್ಮರಾದರು. ಮುಖಂಡನಾಗಬೇಕಾದರೆ ಮೊದಲು ಸ್ವಾರ್ಥವನ್ನು ತ್ಯಾಗ ಮಾಡಬೇಕು.

ಗಣಪತಿಯ ತಲೆ ಆನೆಯ ತಲೆ, ಕಿವಿಗಳು ವಿಶಾಲ. ಆನೆಯು ಭೂಮಿಯ ಮೇಲಿರುವ ಪ್ರಾಣಿಗಳಲ್ಲೆಲ್ಲಾ ಅತ್ಯಂತ ದೊಡ್ಡದು. ಆದ್ದರಿಂದ ಗಣನಾಯಕನಾಗಬಯಸುವವನು ತನ್ನ ಸ್ವಂತ ಧೋರಣೆಯನ್ನು ಸಾಧಿಸಲು ಪ್ರಯತ್ನಿಸದೆ ಬಹುಜನರ ಅಭಿಪ್ರಾಯವನ್ನು ಸ್ವೀಕರಿಸಬೇಕು. ಗಣಪತಿಯು ಏಕದಂತ. ಅಂದರೆ ಜೀವನದ ಲಕ್ಷ್ಯ, ಗುರಿ ಒಂದೇ ಆಗಿರಬೇಕು. ಇಬ್ಬಗೆಗಳು, ದ್ವಂದ್ವಗಳು ಇರಬಾರದು. ಗಣಪತಿಗೆ ಮೊರದಂಥ ಕಿವಿಗಳಿವೆ. ಮೊರದಲ್ಲಿ ಧಾನ್ಯವನ್ನು ಕೇರಿದಾಗ,